

## ಪ್ರಮುಖ ಕಛೇರಿಗಳು

- ಸವಾಯಿ ಗಂಧರ್ವ ಸಂಗೀತ ಮಹೋತ್ಸವ, ಕುಂದಗೋಳ
- ದೂರದರ್ಶನ ದೆಹಲಿ, ಬೆಂಗಳೂರು, ಕಲಬುರ್ಗಿ ಕೇಂದ್ರ
- ಪಂ. ಗುರುರಾವ್ ದೇಶಪಾಂಡೆ ಸಂಗೀತ ಮಹೋತ್ಸವ, ಬೆಂಗಳೂರು
- ಭೋಪಾಲ್ ಸಂಗೀತೋತ್ಸವ, ಮಧ್ಯಪ್ರದೇಶ
- ಹಿಂದೂಸ್ತಾನಿ ಸಂಗೀತ ಮಹೋತ್ಸವ, ವಾರಂಗಲ್
- ಸಂಗೀತ ಸಮ್ಮೇಳನ, ಪುಣೆ
- ಸಿದ್ಧಾರ್ಥ ಕಲಾ ಪರಿಷತ್ ಸಮ್ಮೇಳನ, ವಿಜಯವಾಡ
- ಸಂಗೀತ ಸಮ್ಮೇಳನ, ಬನಾರಸ್
- ಗಡಿನಾಡ ಸಂಗೀತೋತ್ಸವ, ಅಕ್ಕಲಕೋಟೆ
- ಪಂ. ಮಲ್ಲಿಕಾರ್ಜುನ ಮನ್ಸೂರ್ ರಾಷ್ಟ್ರೀಯ ಸಂಗೀತ ಸಮ್ಮೇಳನ
- ಹಂಪಿ ಉತ್ಸವ, ಮೈಸೂರು ದಸರಾ, ಚಾಲುಕ್ಯ ಉತ್ಸವ

ನಿಲಯ ಕಲಾವಿದನಾಗಿ ವೃತ್ತಿ ಆರಂಭಿಸಿದ ಬಳಿಕ ಬಾನ್ಸುರಿ ಬಗ್ಗೆ ಮತ್ತಷ್ಟು ಆಳ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಇಲ್ಲಿ ಫಿಂಗರಿಂಗ್ ಟೆಕ್ನಿಕ್ಸ್ ಬಹಳ ಮುಖ್ಯ. ಬಿದಿರ ಕೊಳವೆಯಲ್ಲಿ ಗಾಳಿ ಹಾಯಿಸಿ ಸ್ವರಗಳ ನಿರ್ವಹಣೆ ಹೇಗೆ, ರಾಗ ವಿಸ್ತಾರ ಪದ್ಧತಿ, ಕೋಮಲ, ಮಂದ್ರ, ತೀವ್ರ ಸ್ವರಗಳನ್ನು ಹೇಗೆ ಪ್ರಸ್ತುತಪಡಿಸುವುದು, ರಾಗ ರಸವನ್ನು ಸ್ವಾದಭರಿತವಾಗಿ ನುಡಿಸುವುದು ಹೇಗೆ ಮುಂತಾದ ವಿಷಯಗಳ ಬಗ್ಗೆ ಚೆನ್ನಾಗಿ ಅರಿತುಕೊಂಡರೆ ಮಾತ್ರ ಒಬ್ಬ ಉತ್ತಮ ಕೊಳಲು ವಾದಕ ತಯಾರಾಗಲು ಸಾಧ್ಯ' ಎನ್ನುವುದು ಖಾಜಿ ಅವರು ನೀಡುವ ವಿವರಣೆ.

ಬಾನ್ಸುರಿಯಲ್ಲಿ ಮೀಂಡ್, ಗಮಕಗಳ ಪ್ರಯೋಗ, ವಿಬ್ರಟೊಗಳನ್ನು ಸಮರ್ಥವಾಗಿ ನಿಭಾಯಿಸುವ ಉಸ್ತಾದ್ ಖಾಜಿ ಅವರು, ಮೀಂಡ್‌ನಲ್ಲಿ ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಜಾರುವುದು, ಸ್ವರದಿಂದ ಸ್ವರಕ್ಕೆ ಏರಿಳಿತವನ್ನು ಮಾಡುವುದು ಎಲ್ಲವೂ ಸುಲಲಿತವಾಗಿ ಬರಬೇಕಾದರೆ ಬಹಳಷ್ಟು ಚಾಕಚಕ್ಯತೆ ಬೇಕು. ಇದು ಕೇಳ್ಮೆಯಿಂದ, ವಿದ್ವಾಂಸರ ನುಡಿಸಾಣಿಕೆಯನ್ನು ಸೂಕ್ಷ್ಮವಾಗಿ ಗಮನಿಸುವುದರಿಂದ ಬರುತ್ತದೆ. ಹಾಗೆ ನೋಡಿದರೆ ನಾನು ಗುರುಮುಖೇನ ಕಲಿತಷ್ಟೇ ನೋಡಿ, ಕೇಳಿ, ಗಮನಿಸಿ ಕಲಿತದ್ದೂ ಬಹಳ ಇದೆ. ಸುಪ್ರಸಿದ್ಧ ಬಾನ್ಸುರಿ ವಾದಕರಾಗಿದ್ದ ಪಂ. ವೆಂಕಟೇಶ ಗೋಡ್ಖಿಂಡಿ ಅವರಿಂದಲೂ 'ಫಿಂಗರಿಂಗ್ ಟೆಕ್ನಿಕ್ಸ್' ಅನ್ನು ಕಲಿತೆ' ಎಂದು ಹೇಳುತ್ತಾರೆ.

'ರಾಗಗಳನ್ನು ನುಡಿಸುವಾಗ ಅನುಭವಿಸಿ ನುಡಿಸಬೇಕು. ಯಮನ್, ಭೂಪಾಲಿ, ಪೂರಿಯ ಧನಾಶ್ರೀ, ಮಾರೊಬಿಹಾಗ್, ಬಿಹಾಗ್, ಶುದ್ಧ ಸಾರಂಗ, ಶ್ಯಾಮಕಲ್ಯಾಣ್ ರಾಗಗಳು ಬಹಳ ಇಷ್ಟ. ಭಕ್ತಿರಸ ಸೂಸುವ ಸಾಯಂಕಾಲದ ಸುಪ್ರಸಿದ್ಧ ರಾಗ ಯಮನ್ ಎಂದಿಗೂ ನುಡಿಸುವ ರಾಗ. ಇವೆಲ್ಲ ರಾಗಗಳನ್ನು ನುಡಿಸುವಾಗ ಪಲುಸ್ಕರ್, ಬಿಸ್ಮಿಲ್ಲಾಖಾನ್ ಅವರ ಸಂಗೀತ ಕಣ್ಣಮುಂದೆ ಬಂದು ನಿಲ್ಲುತ್ತದೆ. ರಾಗಗಳ ಸಾಕ್ಷಾತ್ಕಾರವಾಗುತ್ತದೆ' ಎನ್ನುತ್ತಾರೆ.

ಬಾನ್ಸುರಿಯಲ್ಲಿ ಖಾಜಿ ಅವರ ನಾದರಸ ಕೇಳುಗರಿಗೆ ಎಂದಿಗೂ ಆಪ್ಯಾಯಮಾನ.. ಕೊಳಲಿನಲ್ಲಿ 'ಮೀಂಡ್'ಗಳ ಚಮತ್ಕಾರ ನಿಜಕ್ಕೂ ಅದ್ಭುತ. ಈ ಚಾಕಚಕ್ಯತೆ ಕೆಲವೇ ಕಲಾವಿದರಿಗೆ ಒಲಿಯುತ್ತದೆ. ಖಾಜಿ ಅವರ ನುಡಿಸಾಣಿಕೆಯಲ್ಲಿ ಮೀಂಡ್ (ಸ್ವರಗಳ ಜಾರುವಿಕೆ) ಹಾಗೂ ಸ್ಪಷ್ಟವಾದ ಮುರ್ಕಿಗಳು ಬಿದಿರ ಕೊಳವೆಯಂತಿರುವ ಹಗುರ ವಾದ್ಯದಲ್ಲಿ ಅನುರಣನಗೊಂಡಾಗ ಕೇಳುಗರಲ್ಲೂ ಅದ್ಭುತ ಅನುಭೂತಿ ಉಂಟಾಗುತ್ತದೆ. ಸದ್ಯ ಧಾರವಾಡದಲ್ಲಿ ಆಸಕ್ತರಿಗೆ ಕೊಳಲು ಕಲಿಸುವ ಖಾಜಿ ಅವರು ಮಕ್ಕಳ ಸಂಗೀತಾಸಕ್ತಿಯನ್ನು ನೀರೆರೆದು ಪೋಷಿಸು ತ್ತಿದ್ದಾರೆ. ಆ ಮೂಲಕ ತಮ್ಮ ಐವತ್ತು ವರ್ಷಗಳ ಸುದೀರ್ಘ ಸಂಗೀತಾನುಭವವನ್ನು ಮಕ್ಕಳಿಗೆ ಧಾರೆಯರೆಯುತ್ತಿದ್ದಾರೆ. ■